**ಸಾಕ್ಷಿಗೆ ದಿನಾಂಕ 30.10.2025 ರಂದು -ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರ ಪಾಟೀ ಸವಾಲು: 2 ನೇ ಎದುರುದಾರರ ಪರ ಶ್ರೀ.ಎನ್.ಎಂ.ಪಿ. ವಕೀಲರಿಂದಃ**

1. ಹಿಂದಿನ ವೇಳೆ ನಡೆಸಲಾದ ಪಾಟೀ ಸವಾಲಿನಲ್ಲಿ ಚಂದ್ರಣ್ಣನವರ ಬುಲೆರೋ ವಾಹನ ಆರ್.ಸಿ., ವಿಮಾ ಪಾಲಿಸಿ ಮತ್ತು ಚಾಲಕನ ಡಿಎಲ್ ನ್ನು ಹಾಜರುಪಡಿಸುತ್ತೇನೆ ಎಂದು ಹೇಳಿದ್ದು ಹಾಜರುಪಡಿಸುತ್ತೀರಾ ಎಂದರೆ ಮರೆತು ಬಂದಿರುತ್ತೇನೆ. ಸದರಿ ಚಂದ್ರಣ್ಣನವರನ್ನು ಈ ಪ್ರಕರಣದಲ್ಲಿ ಪಕ್ಷಗಾರರನ್ನಾಗಿ ಮಾಡುತ್ತೇನೆ ಎಂದು ಹೇಳಿದ್ದು, ಆದರೆ ಸಾಧ್ಯವಿಲ್ಲ. ಅಪಘಾತವು ರಾತ್ರಿಯಾಗಿದೆ ಎಂದರೆ ಸರಿ. ಬುಲೆರೋ ವಾಹನ ಅತೀವೇಗದಿಂದ ಹೋಗುತ್ತಿತ್ತು ಎಂದರೆ ಸರಿಯಲ್ಲ. ಅಪಘಾತಪಡಿಸಿದ ವಾಹನ ಸ್ಥಳದಲ್ಲಿಯೇ ಇತ್ತು. ಅಪಘಾತವಾದ ನಂತರ ಬಸ್ಸನ್ನು ನೋಡುವವರೆಗೆ ನನಗೆ ಪ್ರಜ್ಞೆ ಇತ್ತು. ತದನಂತರ ಪ್ರಜ್ಞೆ ಇರಲಿಲ್ಲ.

2. ಅಪಘಾತವು ರಾತ್ರಿಯಾಗಿರುವುದರಿಂದ ಡಿಕ್ಕಿಪಡಿಸಿದ ವಾಹನ ಯಾವುದು ಎಂದು ಮತ್ತು ಅದರ ನೊಂದಣಿ ಸಂಖ್ಯೆ ನನಗೆ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ. ದೂರು ನೀಡಿದ ಭೀಮಣ್ಣರವರಿಗೆ ಒಂದನೇ ಎದುರುದಾರರ ಬಸ್ಸಿನ ಸಂಖ್ಯೆಯನ್ನು ಯಾರು ನೀಡಿರುತ್ತಾರೆ ಎಂದರೆ ಪೊಲೀಸರು ನೀಡಿರುತ್ತಾರೆ. ಪೊಲೀಸರು ಯಾವಾಗ ಅಪಘಾತದ ಸ್ಥಳಕ್ಕೆ ಬಂದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಅಪಘಾತದ ನಂತರ ಕೋಲಾರದ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿರುತ್ತಾರೆ. ಸದರಿ ಆಸ್ಪತ್ರೆಯಿಂದ ಬೇರೆ ಯಾವುದೇ ಆಸ್ಪತ್ರೆಗೆ ಚಿಕಿತ್ಸೆ ಪಡೆಯಲು ಹೋಗಿಲ್ಲ ಎಂದರೆ ಸರಿ. ಬೇರೆ ಯಾವುದೇ ಆಸ್ಪತ್ರೆಯಲ್ಲಿ ದಾಖಲಾಗಿಲ್ಲ ಎಂದರೆ ಸರಿಯಲ್ಲ. ಸರ್ಕಾರಿ ಆಸ್ಪತ್ರೆಗೆ ದಾಖಲಾಗಿದ್ದು ಅದಕ್ಕೆ ಸಂಬಂಧಿಸಿದ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ.

3. ಅಪಘಾತದಿಂದ ನನಗೆ ಸಣ್ಣಪಟ್ಟ ಗಾಯಗಳು ಆಗಿದ್ದವು ಎಂದರೆ ನನ್ನ ಬಲಗೈ ಮುರಿದಿತ್ತು. ನನಗೆ ಯಾವುದೇ ಶಸ್ತ್ರಚಿಕಿತ್ಸೆ ಮಾಡಿಸಿಲ್ಲ ಎಂದರೆ ಸರಿ. ನನ್ನ ಬಲಗೈ ಮುರಿದಿದ್ದು ಈ ಅಪಘಾತದಿಂದಲ್ಲ ಬೇರೆ ಕಾರಣದಿಂದ ಎಂದರೆ ಸರಿಯಲ್ಲ. ಈಗಲೂ ನಾನು ಆರೋಗ್ಯವಾಗಿದ್ದು ಮುಂಚಿನಂತೆ ಕೆಲಸ ಮಾಡಿಕೊಂಡು ಇದ್ದೇನೆ ಎಂದರೆ ಸರಿಯಲ್ಲ. ನಾನು ಮೀನುಗಾರಿಕೆ ಕೆಲಸ ಮಾಡಿ ಪ್ರತಿತಿಂಗಳು ರೂ.25,000/- ಸಂಪಾದಿಸುತ್ತಿದ್ದೆ ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ. ಈಗಲೂ ಸಹ ನಾನು ಚಂದ್ರಣ್ಣರವರ ಬಳಿ ಮೀನುಗಾರಿಕೆ ಕೆಲಸಕ್ಕೆ ಹೋಗುತ್ತಿದ್ದು ಈ ಕಾರಣಕ್ಕಾಗಿ ನಾನು ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ವೈದ್ಯಕೀಯಕ್ಕೆ ರೂ.50,000/- ಖರ್ಚು ಮಾಡಿಲ್ಲ ಎಂದರೆ ಸರಿಯಲ್ಲ. ಅಪಘಾತದ ಸಮಯಕ್ಕೆ ನನಗೆ 26 ವರ್ಷ ವಯಸ್ಸಾಗಿತ್ತು ಎಂದು ತೋರಿಸಲು ಆಧಾರ್ ಕಾರ್ಡ್ ಹಾಜರುಪಡಿಸಿರುತ್ತೇನೆ.

4. ಅಪಘಾತ ನೋಡಿದವರ ಸಾಕ್ಷ್ಯ ಮಾಡಿಸಲು ಆಗುವುದಿಲ್ಲ. ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ದೂರು ನೀಡಿ, ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1ನೇ ಎದುರುದಾರರು ಏಕಪಕ್ಷೀಯ. ಈ ಕಾರಣದಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಗಿರುತ್ತದೆ.**

**<u>ಮರು ವಿಚಾರಣೆಃ ಇಲ್ಲ.</u>**

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ.)**
**(ಓ. ಹೇ. ಕೇ. ಸ.ಇ)**

**3ನೇ ಹೆಚ್ಚುವರಿ ಲಘು ವ್ಯವಹಾರಗಳ**
**ನ್ಯಾಯಾಧೀಶರು, ಬೆಂಗಳೂರು.**